ಸ|| 1907—08ನೆ ಇಸವಿ ಮಿ|| ಅರ್ಜೀ ನಂಬರು 398.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ ಗುಮಾಸ್ತೆಯಾಗಿದ್ದ R. ವೆಂಕಟರಾಮೈಯ್ಯನವರ ಮಗ ಮೃತಪಟ್ಟ ಕೃಷ್ಣಸ್ವಾಮಿ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಸವನಪುರದಲ್ಲಿರುವ ಪೆರ್ಪ R. ವೆಂಕಟರಾಮೈಯ್ಯನವರು, ಮೃತಪಟ್ಟ ಸದರೀ ಕೃಷ್ಣಸ್ವಾಮಿ ಯವರಿಗೆ ತಂದೆ ಆಗಬೇಕೆಂಬ ಹಕ್ಕು ದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೃಷ್ಣಸ್ವಾಮಿಯವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 483—0—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ R. ವೆಂಕಟರಾಮೈಯ್ಯನವರ ಅರ್ಜಿಯನ್ನು ಸ|| 1907ನೆ ಇಸವಿ ಡಿಸೆಂಬರು ತಿಂಗಳು 6ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಸ್ವಾಮಿಯವರ ಆಸ್ತಿಗೆ ಹಕ್ಕು ದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ|| 1907ನೆ ಇಸವಿ ನವಂಬರ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧ.

ಜೆ. ಎಚ್. ಭಾಭಾ, ಸಬ್ ಜಡ್ಜ.

ನೋಟಿಸ.

ತೀರ್ಥಹಳ್ಳಿ, ತಾರೀಖು 9ನೆ ನವಂಬರು 1907.

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳೀ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಶ್ರುತಪಡಿಸುವದೇನಂದರೆ :—

1. ತೀರ್ಥಹಳ್ಳೀ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠಲೈಯ್ಯನವರು ಮತ್ತು ಜವಳಿ ಸುಬ್ಬಾಪುರ ಮಕ್ಕಳು ಮಂಜಪ್ಪನವರು ಸಹಾ ನಮ್ಮ ಮೈನಾರಿಟಿ ಕಾಲದಾರಭ್ಯ ನಮ್ಮ ಜನಕತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯು ನಮಗೆ ಪಿತರಾರ್ಜಿತವಾಗಿಯೂ ಇರುವ ವೈವಟ್ಟಿನ ಆಡಳಿತ ನೋಡುತ್ತಾ ಇದ್ದರು. ಈ ಪೈಕಿ ವಿಠಲೈಯ್ಯನವರು ಈಚಿಗೆ ಮೃತಪಟ್ಟಿದ್ದಾರೆ.

2. ಈ ವಿಠಲೈಯ್ಯನವರು ಮತ್ತು ಈ ಮಂಜಪ್ಪನವರು ಇವರುಗಳಿ ಒಟ್ಟಿನ ಅಥವಾ ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗಲೀ, ವ ಜವಳಿ ಕೀಷಗಿರಿಯಪ್ಪನವರು ಬಿ|| ರಘುಪತಯ್ಯನವರು ಮತ್ತು ಈ ಕೇಷಗಿರಿಯಪ್ಪನವರ ತಮ್ಮ ಹನುಮಂತರಾಯನಾದ ನಾನು ಈರೀತಿ ಇರುವ ನಮ್ಮ ಒಟ್ಟಿನ ಅಥವಾ ನಮ್ಮ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ಕ್ರಯವಾಗಿರತಕ್ಕ ಆಸ್ತಿಗಳು ಮತ್ತು ಇವುಗಳಿಂದ ಸಾಲೆಸಾಲು ಬರತಕ್ಕ ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯು, ಮತ್ತು ಭೋಗ್ಯಾಧಾರ ವ ದೃಶ್ಯಾಧಾರ ವ ಮೈಸಾಲ ಪತ್ರ ಅಥವಾ ಪತ್ರಗಳ ಮತ್ತು ಪ್ರೊನೋಟ್ ಅಥವಾ ಪ್ರೊನೋಟುಗಳ ವಗೈರೆ ಡಾಕ್ಯುಮೆಂಟುಗಳ ಬಾಬತು ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯು, ಮತ್ತು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಮತ್ತು ಸ|| 1906—07ನೆ ಸೇಕಡಾ 4ರ ಮೈಸೂರ್ ಸ್ಟೇಟ್ ಲೋ|| ಪ್ರೊನೋಟುಗಳ ಬಾಬತು ಇವರುಗಳ ಮತ್ತು ನಮ್ಮ ಮತ್ತು ನಮ್ಮ ಮಕ್ಕಳು ಮೈನರರು ಗಾರ್ಡಿಯ್ಯ ನಾವು ಈ ರೀತಿ ಇರತಕ್ಕ ಆಸಲು ಹಣ ಮತ್ತು ಇದರ ಬಡ್ಡಿಯು ಸಹಾ ಮೇಲ್ಕಂಡ ನಮ್ಮ ವೈವಟ್ಟಿಗೆ ಸಮ್ಮಂಧಪಟ್ಟಿದ್ದಾಗಿ ನಮಗೆ ಬರತಕ್ಕದ್ದಾಗಿರುತ್ತೆ.

3. ಇದರಲ್ಲಿ ಈ ವಿ ಲೈಯ್ಯನವರಿಗೆ ಆಗಲಿ, ಈ ಮಂಜಪ್ಪನವರಿಗಾಗಲಿ ಅಥವಾ ಈ ವಿಠಲೈಯನವರ ತಮ್ಮ ಶ್ರೀಪತಿರಾಯರ ಮಕ್ಕಳು 1ನೆ ರಂಗರಾವ್, 2ನೆ ಬಾಲಕೃಷ್ಣರಾವ್, 3ನೆ ಆನಂದರಾವ್, 4ನೆ ವಾಮನರಾವ್, 5—4 ಮೈನರು, ಗಾರ್ಡಿಯ್ 1ನೆ ರಂಗರಾವ್ ಮತ್ತು ಈ ಮಂಜಪ್ಪನವರ ತಮ್ಮಂದರು 5ನೆ ಪಾಂಡುರಂಗಪ್ಪನವರು, 6ನೆ ರಾಮರಾಯರು, 7ನೆ ನಾಗೇಶರಾವ್ ಪೈವತಿ ಮಗ ಭಾಸ್ಕರರಾವ್ ಮೈನರ್, ಗಾರ್ಡಿಯ್ ಮಂಜಪ್ಪನವರು, 8ನೆ ಗೋಪಾಲರಾವ್ ಬಿ|| ಪಾಂಡುರಂಗಪ್ಪನವರು, 9ನೆ ಇವರ ತಮ್ಮ ಮೂಜ್ಲಗಿರಿಯಪ್ಪನವರು, 10ನೆ ಮಾಧವರಾವ್ ಬಿ|| ರಾಮರಾಯರು ಇವರುಗಳಿಗೇ ಆಗಲಿ ಹಕ್ಕು ಬಾಧ್ಯತೆ ಇರುವದಿಲ್ಲಾ.

4. ಈ ವಿಠಲೈಯನವರು ಮತ್ತು ಈ ಮಂಜಪ್ಪನವರು ಈಚಿಗೆ ಈ ಮಂಜಪ್ಪನವರು ಮೇಲೆ ಕಂಡ ಇವರ ತಮ್ಮಂದರ ಮಕ್ಕಳ ಮತ್ತು ತಮ್ಮಂದರ ಸಾಲಗಳಿಗೆ ಈ ನಮ್ಮ ವೈವಟ್ಟಿನ ಆಸ್ತಿಯನ್ನು ಗುರಿಪಡಿಸಿದ್ದು ಇದರ ಆಸ್ತಿಗಳಿಗೆ ಲೋಪ ಪಡಿಸಿದ್ದು ಮತ್ತು ಇನ್ನೂ ಲೋಪ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ಇನ್ನೂ ಕೆಲವು ಸಂಗತಿಗಳಲ್ಲಿ ನಮಗೆ ನೋಸವ ವಿರ್ಬಂಧಪಡಿಸಿದ್ದೂ ಮತ್ತು ಇನ್ನೂ ನೋಸ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ವಗೈರೆ ಅನೇಕ ವಿಧವಾದ ಈ ವೈವಟ್ಟಿಗೂ ಇದರ ಹಕ್ಕು ದಾರರಾದ ನಮಗೂ ನಮ್ಮ ಪ್ರತಿನಿಧಿಯವರಿಗೂ ವಿರೋಧವಾದ ವಿದ್ಯಮಾನಗಳು ನಡಿಸಿದ್ದೂ ಮತ್ತು ಇನ್ನೂ ನಡಸುವದಕ್ಕೆ ಪ್ರಯತ್ನಿಸುವದೂ ವಗೈರೆ ನನ್ನ ನೋಟೀಸಿಗೆ ಬಂದಿರುವದರಿಂದ ನಾನು ಇವರ ಆಡಳಿತವನ್ನು ವಜಾ ಮಾಡಿಧೇನೆ.

5. ಮೇಲೆ 2ನೆ ಕಲಂನಲ್ಲಿ ಕಂಡ ಹೆಸರುಗಳಿಗೆ ಕ್ರಯವಾಗಿರತಕ್ಕ ಆಸ್ತಿಗಳ ಬಾಬತು ಗುತ್ತಿಗೆ ಅಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯನ್ನು ಮತ್ತು ಭೋಗ್ಯಾಧಾರ ವಗೈರೆ ಡಾಕ್ಯುಮೆಂಟುಗಳ ಸಮ್ಮಂಧ ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯನ್ನೂ ಈ ಮುಂತಾದ್ದು ವಗೈರೆ ಎಷ್ಟನ್ನಾದರೂ ಮೇಲೆ 3ನೆ ಕಲಂನಿಲ್ಲಿ ನಮೂದಿಸಿದ ಈ ವೈವಟ್ಟಿಗೆ ಹಕ್ಕು ದಾರರಲ್ಲದವರ ಕಡಿಗೆ ವಸೂಲು ಕೊಡಕೂಡದು. ಕೊಟ್ಟರೆ ನಮ್ಮ ವೈವಟ್ಟಿಗೆ ವ ನನಗೆ ಬಂದಂತೆ ನಾನು ಒಪ್ಪಿಕೊಳ್ಳುವದಿಲ್ಲಾ. ಮೇಲ್ಕಂಡ ಪತ್ರಗಳು ವಗೈರೆ ಇವರು ಇದರ ಆಡಳಿತ ನೋಡುತ್ತಾ ಇರುವಾಗ್ಯೆ ಇವರ ಹೆಸರಿಗೆ ನಾವುಪೂರ್ತ ಹುಟ್ಟಿದ್ದಾಗಿರುತ್ತವೆ. ಈ ಮೇಲೆ ಕಂಡ ಆಸ್ತಿಗಳ ಪೈಕಿ ಅಥವಾ ಡಾಕ್ಯೂಮೆಂಟುಗಳ ಪೈಕಿ ಎಷ್ಟನ್ನಾದರೂ ಈ ವೈವಟ್ಟಿಗೆ ಹಕ್ಕು ದಾರರಲ್ಲದ ಮೇಲೆ ವಿವರಿಸಿದ ಈ ಮಂಜಪ್ಪನವರು ವಗೈರೇರ ಪೈಕಿ ಯಾರಿಂದಲೇ ಆಗಲಿ ಕ್ರಯ ಪರಿವರ್ತನಾ ಮೂಲಕ ಯಾರಾದರೂ ಪಡಕೊಂಡರೆ ಆಗಲಿ ಮೇಡೂರು ವಗೈರೆ ಮೂಲಕ ಪರಭಾರೆ ಪಡಕೊಂಡರೆ ಆಗಲಿ ಅದಕ್ಕೆ ನಾನು ಒಪ್ಪಿಕೊಳ್ಳುವದಿಲ್ಲ ಮತ್ತು ಹಾಗೆ ಪಡಕೊಂಡವರ ಕಡಿಗೆ ಎಷ್ಟನ್ನಾದರೂ ವಸೂಲು ಕೊಟ್ಟಾಗ್ಯೂ ಅದನ್ನು ನಾನು ಒಪ್ಪಿಕೊಳ್ಳುವದಿಲ್ಲ ಎಂಬುವದನ್ನು ತಿಳಿದಿರತಕ್ಕದ್ದು. ಇವರುಗಳು ಮತ್ತು ನಾವು ಸಹಾ ಬಂದೇ ಮನೆಯಲ್ಲಿ ವಾಸವಾಗಿದ್ದಾಗ್ಯೂ ಈ ವೈವಟ್ಟಿನಲ್ಲಿ ಇವರುಗಳಿಗೆ ಏನೂ ಹಕ್ಕು ಇರುವದಿಲ್ಲಾ ಎಂಬುವದನ್ನು ಸಹಾ ತಿಳಿದಿರತಕ್ಕದ್ದು.

ತೀರ್ಥಹಳ್ಳೀ ಜವಳಿ ಹನುಮಂತರಾಯನ ರುಜು.